**ದಿನಾಂಕಃ 04.08.2023.**

**P.W 1**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಪಿ.ಎಸ್., ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆಃ-

1. ನೋಟೀಸು ದಿಃ 08.08.2018.
2. ನೋಟೀಸು ದಿಃ 18.10.2016.
3. ನೋಟೀಸು ದಿಃ 20.07.2017.
4. ಸರ್ವೆ ನಂ. 57/1 ರ ಆರ್ ಟಿ ಸಿ.

ಇವುಗಳನ್ನು ಕ್ರಮವಾಗಿ ಈಗ ನಿಪಿ.1 ರಿಂದ 4 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**

**ದಿನಾಂಕಃ 16.12.2023.**

**P.W 1**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಪಿ.ಎಸ್., ವಕೀಲರಿಂದಃ**

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

5. ಅನೆಕ್ಷರ್-ಟು ನೋಟಿಸ್ ದಿಃ27.01.2017.
6. ಸರ್ವೆ ನಂ. 57/1 ರ ಆರ್.ಟಿ.ಸಿ.
7. ಸರ್ವೆ ನಂ. 57/1 ರ ಆರ್.ಟಿ.ಸಿ.
8. ಮ್ಯುಟೇಷನ್ ಆದೇಶ.
9. ಆಧಾರ್ ಕಾರ್ಡ್ ಪ್ರತಿ.

ಸದರಿ ದಾಖಲೆಗಳನ್ನು ನಿಪಿ 1 ರಿಂದ 9 ಎಂದು ಗುರುತಿಸಲಾಯಿತು.

**ಎದುರುದಾರರ ಪರ ವಕೀಲರು ವಿನಂತಿಯ ಮೇರೆಗೆ ವಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 15.11.2024**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಹೆಚ್.ಎಸ್.ಪಿ. ವಕೀಲರಿಂದಃ**

ನನ್ನ ಜಮೀನಿನ ಸರ್ವೆ ನಂ.ಗಳು 57/1. ಆ ಜಮೀನಿನಲ್ಲಿ 19 ಗುಂಟೆ ಪ್ರದೇಶದಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ. ನನ್ನ ಜಮೀನಿನಲ್ಲಿ ಎದುರುದಾರರು ಕೇವಲ 18 ವರೆ ಗುಂಟೆಯಲ್ಲಿ ಮಾತ್ರ ಲೈನು ಎಳೆದಿದ್ದಾರೆ ಎಂದರೆ ಸರಿ. ನನ್ನ ಜಮೀನಿನ ಅಪಮೌಲ್ಯಕ್ಕಾಗಿ ಎದುರುದಾರರು ನನ್ನ ಖಾತೆಗೆ 2,13,675/- ರೂ.ಗಳನ್ನು ಜಮಾ ಮಾಡಿದ್ದಾರೆ ಎಂದರೆ ಸರಿ. ಲೈನು ಎಳೆಯುವ ಕಾಲಕ್ಕೆ ನನ್ನ ಜಮೀನಿನಲ್ಲಿ ಆಗಿದ್ದ ಬೆಳೆ ನಷ್ಟ ಪರಿಹಾರದ ಬಾಬ್ತು 43,446/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ.

2. ನನ್ನ ಜಮೀನಿನಲ್ಲಿದ್ದ 20 ತೆಂಗಿನ ಸಸಿಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 1,08,100/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಜಮೀನಿನಲ್ಲಿದ್ದ 8 ಕಾಡು ಮರಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 14,795/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ಒಟ್ಟಾರೆಯಾಗಿ ನನಗೆ 3,80,016/- ರೂ.ಗಳನ್ನು ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ಸರಿ. 2018 ರಲ್ಲಿ ನನ್ನ ಜಮೀನಿನಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ.

3. ನನ್ನ ಜಮೀನಿನಲ್ಲಿ 1 ಗುಂಟೆ ಜಮೀನಿಗೆ ಈಗ ಬೆಲೆ 75,000/- ರೂ.ಗಳು ಇದೆ ಎಂದು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಈಗಲೂ ಕೂಡ ಪೂರ್ತಿ ಜಮೀನು ನನ್ನ ಸ್ವಾಧೀನದಲ್ಲಿದೆ ಮತ್ತು ನಾನೇ ಅದರ ಮಾಲೀಕ ಎಂದರೆ ಸರಿ. ನನ್ನ ಜಮೀನಿನ ಅಪಮೌಲ್ಯ, ಬೆಳೆ ನಷ್ಟ ಪರಿಹಾರ, ಮರಗಳ ಬಾಬ್ತು ಪರಿಹಾರ ಎಲ್ಲಾ ಸೇರಿ ಎದುರುದಾರರು ನನಗೆ 3,80,016/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ನನ್ನ ಜಮೀನಿಗೆ ಲೈನು ಎಳೆಯುವ ಕಾಲಕ್ಕೆ ಇದ್ದ ಸೂಕ್ತ ಬೆಲೆಯನ್ನು ನೀಡಿದ್ದರೂ ಸಹ ನಾನು ಸುಳ್ಳು

ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**